**C.C. 4913/2022**
**PW-1**

ದಿಃ **20.07.2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ ಶ್ರೀ ಎಂ.ಸಿ.ಕೆ. ವಕೀಲರಿಂದ**

ನೀವು ಹಾಗೂ ಆರೋಪಿ ಒಂದೇ ಊರಿನವರು ಎಂದರೆ ಸರಿ. ನಾನು ವ್ಯವಸಾಯಗಾರ. ಆರೋಪಿ ವ್ಯವಸಾಯ ಮಾಡುತ್ತಾರೆ. ಆರೋಪಿ ಈಗ್ಗೆ **11-12** ವರ್ಷಗಳಿಂದ ಪರಿಚಯ. ಆರೋಪಿ ನಿಮ್ಮ ಮನೆಗೆ ಬರುವುದು ಹಾಗೂ ನೀವು ಅವರ ಮನೆಗೆ ಹೋಗುವುದು ಮಾಡುತ್ತಿದ್ದೀರಾ ಎಂದರೆ ಸಾಕ್ಷಿ ಇಲ್ಲ, ಒಟ್ಟಿಗೆ ಓಡಾಡುತ್ತಿದ್ದೇವು ಎಂದು ಹೇಳುತ್ತಾರೆ. ನೀವು ಹಾಗೂ ಆರೋಪಿ ಒಟ್ಟಿಗೆ ವ್ಯವಹಾರ ಮಾಡುತ್ತಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

ಆರೋಪಿ ನಿಮ್ಮಿಂದ ಯಾವ ದಿನಾಂಕ, ತಿಂಗಳು, ವರ್ಷದಂದು ಹಣ ಕೇಳಿದರು ಎಂದರೆ ಸಾಕ್ಷಿ ಆಗಸ್ಟ್ **2021** ರಂದು ಕೇಳಿದ್ದು, ದಿನಾಂಕ ಜ್ಞಾಪಕ ಇಲ್ಲ ಎಂದು ಹೇಳುತ್ತಾರೆ. ಆರೋಪಿ ಯಾವ ಜಾಗದಲ್ಲಿ ಸಾಲ ಕೇಳಿದರು ಎಂದರೆ ಸಾಕ್ಷಿ ನಮ್ಮ ಮನೆಗೆ ಒಬ್ಬರೇ ಬಂದು ಸಾಲ ಕೇಳಿರುತ್ತಾರೆ ಎಂದು ಹೇಳುತ್ತಾರೆ. ಆರೋಪಿ ನಿಮ್ಮ ಮನೆಗೆ ಬಂದಾಗ, ನಿಮ್ಮ ಮನೆಯಲ್ಲಿ ಯಾರ್ಯಾರು ಇದ್ದರು ಎಂದರೆ ಸಾಕ್ಷಿ ನಾನೊಬ್ಬನೇ ಇದ್ದೆ ಎಂದು ಹೇಳುತ್ತಾರೆ. ಆರೋಪಿ ಯಾವ ಕಾರಣಕ್ಕಾಗಿ ನಿಮ್ಮ ಬಳಿ ಹಣ ಕೇಳಿದರು ಎಂದರೆ ಸಾಕ್ಷಿ ವ್ಯವಸಾಯಕ್ಕೆ ಎಂದು ಹೇಳುತ್ತಾರೆ.

ಆರೋಪಿಯ ತಂದೆ ನಿಮ್ಮ ಊರಿನವರಾಗಿದ್ದು, ನಿಮಗೆ ಬಹಳ ಪರಿಚಯ ಎಂದರೆ ಸಾಕ್ಷಿ ನಮ್ಮ ಊರಿನವರೇ, ಆದರೆ ಅಷ್ಟಾಗಿ ಪರಿಚಯ ಇಲ್ಲ ಎಂದು ಹೇಳುತ್ತಾರೆ. ಆರೋಪಿ ಅವರ ತಂದೆಯ ಜೊತೆಯಲ್ಲಿ ಒಟ್ಟಿಗೆ ಇದ್ದು ವ್ಯವಸಾಯ ಮಾಡುತ್ತಿದ್ದಾರೆಂದರೆ ಸರಿ. ನೀವು ಆರೋಪಿಯ ತಂದೆಗೆ ಆರೋಪಿ ಹಣ ಕೇಳಿದ ವಿಚಾರವನ್ನು ತಿಳಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನೀವು ಹಾಗೂ ಆರೋಪಿಯ ತಂದೆ ಒಂದೇ ಊರಿನವರಾಗಿರುವುದರಿಂದ, ಅವರಿಗೆ ಎಷ್ಟು ಭೂಮಿ ಇದೆ, ಅವರು ಏನು ಹಣಕಾಸು ವ್ಯವಹಾರ ಮಾಡುತ್ತಾರೆಂಬುದು ನಿಮಗೆ ಗೊತ್ತು ಎಂದರೆ ಸರಿ.

ಆರೋಪಿ ಹಾಗೂ ಆರೋಪಿಯ ತಂದೆ ಆರ್ಥಿಕವಾಗಿ ಚೆನ್ನಾಗಿದ್ದಾರೆಂದರೆ ಸರಿ. ಆರೋಪಿ ಹಾಗೂ ಆರೋಪಿಯ ತಂದೆಗೆ ಸೇರಿದ ಸಾಕಷ್ಟು ಜಮೀನು ಇದೆ ಎಂದರೆ ಸರಿ. ನಿಮಗೆ ಸೇರಿದ ಎಷ್ಟು ಜಮೀನು ಇದೆ ಎಂದರೆ ಸಾಕ್ಷಿ **4** ಎಕರೆ ಎಂದು ಹೇಳುತ್ತಾರೆ. ಸದರಿ ಜಮೀನಿನಲ್ಲಿ ಏನು ಬೆಳೆ ಬೆಳೆಯುತ್ತೀರಿ ಎಂದರೆ ಸಾಕ್ಷಿ ಹೊಗೆಸೊಪ್ಪು ಮತ್ತು ಜೋಳ ಎಂದು ಹೇಳುತ್ತಾರೆ. **4** ಎಕರೆ ಜಮೀನಿನಲ್ಲಿ ವ್ಯವಸಾಯ ಮಾಡುವುದು ಹೊರತುಪಡಿಸಿ ಬೇರೆ ವ್ಯವಹಾರ ನಿಮಗೆ ಗೊತ್ತಿಲ್ಲ ಎಂದರೆ ಸರಿ. ನಿಮಗೆ **4** ಎಕರೆ ಜಮೀನಿನಿಂದ ಒಂದು ವರ್ಷಕ್ಕೆ ಎಷ್ಟು ಆದಾಯ ಬರುತ್ತದೆಂದರೆ ಸಾಕ್ಷಿ **4** ಲಕ್ಷದವರೆಗೂ ಆದಾಯ ಇದೆ ಎಂದು ಹೇಳುತ್ತಾರೆ. **4** ಲಕ್ಷದ ಆದಾಯದೊಳಗೆ ಬಿತ್ತನೆ ಬೀಜ, ರಸಗೊಬ್ಬರ, ಆಳುಗಳ ಕೂಲಿ ಮತ್ತು ಇತರೆ ಖರ್ಚುಗಳು ಬರುತ್ತವೆ ಎಂದರೆ ಸರಿ.

ನಿಮ್ಮ ಮನೆಯಲ್ಲಿ ನೀವೊಬ್ಬರೇ ಇದ್ದಿರೋ, ಹೆಂಡತಿ ಮತ್ತು ಮಕ್ಕಳು ಇದ್ದಾರೋ ಎಂದರೆ ಸಾಕ್ಷಿ ನಾನು, ನನ್ನ ಹೆಂಡತಿ ಮತ್ತು ಮಗಳು ಇದ್ದೇವೆ ಎಂದು ಹೇಳುತ್ತಾರೆ. ನಿಮಗೆ ಬರುವ ಕೃಷಿ ಆದಾಯದಿಂದಲೇ ಮನೆಯ ನಿರ್ವಹಣೆ, ಔಷದೋಪಚಾರ ಮತ್ತು ಇತರೆ ಖರ್ಚುಗಳನ್ನು ಭರಿಸಬೇಕು ಎಂದರೆ ಸರಿ.

ಆಗಸ್ಟ್ **2021** ರಲ್ಲಿ ಆರೋಪಿ ಹಣ ಕೇಳಿದ ಎಂದು ಹೇಳಿದ್ದು, ನೀವು ಅಂದೇ ಹಣ ಕೊಟ್ಟಿರಾ ಎಂದರೆ ಸಾಕ್ಷಿ ಹೌದು, ಅದೇ ತಿಂಗಳು ಕೊಟ್ಟೆ ಎಂದು ಹೇಳುತ್ತಾರೆ. ನೀವು ಆರೋಪಿಗೆ ಹಣ ಕೊಡುವ ಸಮಯದಲ್ಲಿ ನಿಮ್ಮೊಂದಿಗೆ ಯಾರು ಇದ್ದರು ಎಂದರೆ ಸಾಕ್ಷಿ ಯಾರೂ ಇರಲಿಲ್ಲ ಎಂದು ಹೇಳುತ್ತಾರೆ. ಆರೋಪಿಯೊಂದಿಗೆ ಯಾರಿದ್ದರು ಎಂದರೆ ಸಾಕ್ಷಿ ಯಾರೂ ಇರಲಿಲ್ಲ ಎಂದು ಹೇಳುತ್ತಾರೆ.

ನೀವು ಆರೋಪಿಗೆ ಕೊಟ್ಟೆ ಎಂದು ಹೇಳುವ ಹಣ ಎಲ್ಲಿಂದ ಬಂದಿತ್ತು ಎಂದರೆ ಸಾಕ್ಷಿ ಬ್ಯಾಂಕಿನಿಂದ ತಂದು ಮನೆಯಲ್ಲಿ ಇಟ್ಟಿದ್ದೆ ಎಂದು ಹೇಳುತ್ತಾರೆ. ಬ್ಯಾಂಕಿನಿಂದ ಹಣ ತಂದ ಬಗ್ಗೆ ಹಾಗೂ ಕೃಷಿ ಸಾಲ ಪಡೆದ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಕೃಷಿ ಸಾಲ ಬೇಕೆಂದು ಯಾವಾಗ ಅರ್ಜಿ ಸಲ್ಲಿಸಿದ್ದೀರಿ ಎಂದರೆ ಸಾಕ್ಷಿ ಪ್ರತಿ ವರ್ಷ ಮಾರ್ಚ್ ಕೊನೆಯ ವಾರದಂದು ಎಂದು ಹೇಳುತ್ತಾರೆ. ಸಾಲ

ಮಂಜೂರಾಗಿ ನಿಮ್ಮ ಖಾತೆಗೆ ಯಾವಾಗ ನಗದೀಕರಣವಾಗುತ್ತದೆಂದರೆ ಸಾಕ್ಷಿ ಜೂನ್ **1** ಅಥವಾ **2** ನೇ ತಾರೀಖಿನಂದು ಜಮಾ ಆಗುತ್ತದೆ ಎಂದು ಹೇಳುತ್ತಾರೆ. ನೀವು ಸದರಿ ಹಣವನ್ನು ಯಾವಾಗ ಡ್ರಾ ಮಾಡಿಕೊಂಡಿರುತ್ತೀರಿ ಎಂದರೆ ಸಾಕ್ಷಿ ಜುಲೈ ಯಲ್ಲಿ ಎಂದು ಹೇಳುತ್ತಾರೆ. ಹಣವನ್ನು ಡ್ರಾ ಮಾಡಿಕೊಂಡ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಆರೋಪಿಗೆ ಎಷ್ಟು ಹಣ ಸಾಲ ಕೊಟ್ಟಿದ್ದೀರಿ ಎಂದರೆ ಸಾಕ್ಷಿ ಮೂರುವರೆ ಲಕ್ಷ ಎಂದು ಹೇಳುತ್ತಾರೆ. ಆರೋಪಿಗೆ ಹಣವನ್ನು ಚೆಕ್ ಮೂಲಕ ಕೊಟ್ಟಿರಾ ಎಂದರೆ ಸಾಕ್ಷಿ ಇಲ್ಲ, ನಗದಾಗಿ ಎಂದು ಹೇಳುತ್ತಾರೆ. ಎಷ್ಟು ಮುಖಬೆಲೆಯ ಎಷ್ಟು ನೋಟುಗಳನ್ನು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ **500** ಮುಖಬೆಲೆಯ **7** ಕಂತೆಯ ನೋಟುಗಳನ್ನು ನೀಡಿರುತ್ತೇನೆ ಎಂದು ಹೇಳುತ್ತಾರೆ. ಸದರಿ ಮೂರುವರೆ ಲಕ್ಷ ಹಣವನ್ನು ನೀವು ಲೆಕ್ಕ ಹಾಕಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಮೊದಲು ನಾನೇ ಲೆಕ್ಕ ಮಾಡಿ ಕೊಟ್ಟೆ ಎಂದು ಹೇಳುತ್ತಾರೆ. ಆರೋಪಿಗೆ ಹಣ ಕೊಡುವ ಸಮಯದಲ್ಲಿ ನೀವು ಅವರ ತಂದೆಗೆ ವಿಚಾರವನ್ನು ತಿಳಿಸಿಲ್ಲ ಎಂದರೆ ಸರಿ.

ಹಣವನ್ನು ಆರೋಪಿ ಎಷ್ಟು ದಿನಗಳಲ್ಲಿ, ಹೇಗೆ ಮರುಪಾವತಿಸುವುದಾಗಿ ಹೇಳಿದ ಎಂದರೆ ಸಾಕ್ಷಿ ನಿರ್ದಿಷ್ಟವಾಗಿ **4** ತಿಂಗಳಲ್ಲಿ ವಾಪಸ್ಸು ಕೊಡುವುದಾಗಿ ತಿಳಿಸಿದ ಎಂದು ಹೇಳುತ್ತಾರೆ. **4** ತಿಂಗಳ ನಂತರ ಆರೋಪಿ ಹಣ ಮರುಪಾವತಿಸಿದನಾ ಎಂದರೆ ಸಾಕ್ಷಿ ಇಲ್ಲ, **6** ತಿಂಗಳುಗಳ ಕಾಲ ಮುಂದೂಡುತ್ತಾ ಬಂದ ಎಂದು ಹೇಳುತ್ತಾರೆ. ಆರೋಪಿ ಕಾಲ ಮುಂದೂಡುತ್ತಾ ಬಂದ ವಿಚಾರವನ್ನು ಆರೋಪಿಯ ತಂದೆಗೆ ತಿಳಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಆರೋಪಿಗೆ **4** ತಿಂಗಳ ನಂತರ ಹೋಗಿ ಹಣ ಪಾವತಿಸುವಂತೆ ಕೇಳಿರುತ್ತೇನೆ. **2022** ರಲ್ಲಿ ಮತ್ತೊಮ್ಮೆ ಆರೋಪಿಯನ್ನ ಹಣ ಪಾವತಿಸುವಂತೆ ಕೇಳಿರುತ್ತೇನೆ. **2022** ರಲ್ಲಿ ಮತ್ತೊಮ್ಮೆ ಆರೋಪಿಯನ್ನು ಕೇಳಿದಾಗ, ಆರೋಪಿ ಕೊಡುತ್ತೇನೆಂದು ಕಾಲ ಮುಂದೂಡುತ್ತಾ ಬಂದಿರುತ್ತಾನೆ. ಆರೋಪಿ **2022** ರಲ್ಲಿ ಕಾಲ ಮುಂದೂಡಿದಾಗ ಆರೋಪಿಯ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. **2022** ರಲ್ಲಿ ಕಾಲ ಮುಂದೂಡಿದಾಗ ಮತ್ತೊಮ್ಮೆ ಆರೋಪಿಯನ್ನು ಹಣ

ಪಾವತಿಸುವಂತೆ ಕೇಳಿರುತ್ತೀರಿ ಎಂದರೆ ಸಾಕ್ಷಿ ಏಪ್ರಿಲ್ **2022** ರಲ್ಲಿ ಮತ್ತೊಮ್ಮೆ ಕೇಳಿದಾಗ, ಆರೋಪಿ ಚೆಕ್ ನೀಡಿರುತ್ತಾರೆ ಎಂದು ಹೇಳುತ್ತಾರೆ. ಆರೋಪಿ ನಿಮಗೆ ನೀಡಿದ ಚೆಕ್ ನಂ. ಗೊತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನಿಪಿ-**1** ಕ್ಕೆ ಆರೋಪಿ ಸಹಿಯನ್ನು ನಮ್ಮ ಮನೆಯಲ್ಲೇ ಮಾಡಿ ಕೊಟ್ಟಿರುತ್ತಾರೆ. ನಿಪಿ-**1** ರಂತೆ ಚೆಕ್ ನೀಡುವ ಸಮಯದಲ್ಲಿ ನನ್ನ ಹಾಗೂ ಆರೋಪಿಯನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ. ನಿಪಿ-**1** ರಲ್ಲಿ ದಿನಾಂಕ ಹಾಗೂ ಮೊತ್ತದ ಬರವಣಿಗೆಯಲ್ಲಿ ಹಾಗೂ ಅಕ್ಷರಗಳಲ್ಲಿ ವ್ಯತ್ಯಾಸ ಇದೆ ಎಂದರೆ ಸಾಕ್ಷಿ ವ್ಯತ್ಯಾಸ ಇಲ್ಲ, ಆರೋಪಿಯೇ ಬರೆದಿದ್ದು ಎಂದು ಹೇಳುತ್ತಾರೆ. ಆರೋಪಿ ನಿಪಿ-**1** ರಲ್ಲಿ ಆಂಗ್ಲ ಭಾಷೆಯಲ್ಲಿ ಸಹಿ ಹಾಕಿರುತ್ತಾರೆಂದರೆ ಸರಿ. ನಿಪಿ-**1** ರಲ್ಲಿ ನಿಮ್ಮ ಹೆಸರು ಹಾಗೂ ಹಣದ ಮೊತ್ತವನ್ನು ಆಂಗ್ಲ ಭಾಷೆಯಲ್ಲಿ ನಮೂದಿಸಲಾಗಿದೆ ಎಂದರೆ ಸರಿ. ನಿಪಿ-**1** ರಲ್ಲಿ ಆರೋಪಿಯ ಆಂಗ್ಲ ಭಾಷೆಯ ಸಹಿ, ನಿಮ್ಮ ಹೆಸರು ಹಾಗೂ ಹಣದ ಮೊತ್ತದ ಬರವಣಿಗೆಯಲ್ಲಿ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ನಿಪಿ-**1** ರಲ್ಲಿ ದಿನಾಂಕ, ಹೆಸರು ಮತ್ತು ಮೊತ್ತವನ್ನು ಆರೋಪಿ ಬರೆದಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಆರೋಪಿಯೇ ಬರೆದದ್ದು ಎಂದು ಹೇಳುತ್ತಾರೆ.

ನಿಮಗೆ ಕೃಷಿಯಿಂದ ಎಷ್ಟು ಆದಾಯ ಬರುತ್ತದೆಂಬ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನಿಮಗೆ ಯಾವ ದಿನಾಂಕದಂದು ಆರೋಪಿಯ ಖಾತೆಯಲ್ಲಿ ಹಣ ಇಲ್ಲ ಎಂದು ಬ್ಯಾಂಕಿನಿಂದ ಹಿಂಬರಹ ನೀಡಿರುತ್ತಾರೆಂದರೆ ಸಾಕ್ಷಿ ದಿಃ **04.04.2022** ರಲ್ಲಿ ಎಂದು ಹೇಳುತ್ತಾರೆ. ಬ್ಯಾಂಕಿನಿಂದ ಹಿಂಬರಹ ನೀಡಿದ ಸಮಯದಲ್ಲಿ ಆರೋಪಿಯನ್ನು ಹಣ ಕೊಟ್ಟು ಚೆಕ್ ವಾಪಸ್ಸು ಪಡೆಯುವಂತೆ ಕೇಳಿದ್ದೀರಾ ಎಂದರೆ ಸಾಕ್ಷಿ ಕೇಳಿದ್ದೆ ಎಂದು ಹೇಳುತ್ತಾರೆ. ಸದರಿ ವಿಚಾರವನ್ನು ಆರೋಪಿಯನ್ನು ಕೇಳುವ ಸಮಯದಲ್ಲಿ ಯಾರ್ಯಾರು ಹಾಜರಿದ್ದರು ಎಂದರೆ ಸಾಕ್ಷಿ ಆರೋಪಿಯನ್ನು ನನ್ನ ಮನೆಗೆ ಕರೆತಂದು ಕೇಳಿರುತ್ತೇನೆ ಎಂದು ಹೇಳುತ್ತಾರೆ. ಆರೋಪಿ ಚೆಕ್ ನ್ನು ವಾಪಸ್ಸು ಕೊಡುವಂತೆ, ಕಾಲಾವಕಾಶ ಕೊಟ್ಟರೆ ಹಣ ಮರುಪಾವತಿಸುವಂತೆ ಕೇಳಿದನಾ ಎಂದರೆ ಸಾಕ್ಷಿ ತನ್ನ ಬಳಿ ಹಣ ಇಲ್ಲ, ಕೇಸ್ ಹಾಕಿಕೊಳ್ಳುವಂತೆ ಹೇಳಿದ ಎಂದು ಹೇಳುತ್ತಾರೆ. ಸದರಿ ವಿಚಾರವನ್ನು

ಆರೋಪಿಯ ತಂದೆಗೆ ತಿಳಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಆರೋಪಿ ಹಣ ಕೊಡುವುದಿಲ್ಲ, ಕೇಸ್ ಹಾಕಿಕೊಳ್ಳುವಂತೆ ಹೇಳಿದ ವಿಚಾರವನ್ನು ಪಂಚಾಯಿತಿಗೆ ಏನಾದರೂ ತಿಳಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಆರೋಪಿ ಪ್ರಕರಣ ದಾಖಲಿಸುವಂತೆ ಹೇಳಿದ ನಂತರ ನೀವೇನು ಮಾಡಿದ್ದೀರಿ ಎಂದರೆ ಸಾಕ್ಷಿ ನಾನು ಪ್ರಕರಣ ದಾಖಲಿಸಿದೆ ಎಂದು ಹೇಳುತ್ತಾರೆ.

ಆರೋಪಿ ಕಂಪಲಾಪುರ ಗ್ರಾಮದಲ್ಲಿ ಮಟನ ಹಾಗೂ ಚಿಕನ್ ಅಂಗಡಿ ನಡೆಸುತ್ತಾರೆಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಆರೋಪಿಯ ಅಂಗಡಿಗೆ ನೀವು ಭೇಟಿ ನೀಡಿರುತ್ತೀರಿ ಹಾಗೂ ಅವರಿಂದ ನೀವು ಮಟನ ಸಹ ಖರೀದಿಸಿರುತ್ತೀರಿ ಎಂದರೆ ಸರಿಯಲ್ಲ. ಆರೋಪಿ ಮಧ್ಯವ್ಯಸನಿ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಮಗೂ ಸಹ ಕುಡಿತದ ಚಟ ಇದೆ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನೀವು ಹಾಗೂ ಆರೋಪಿ ನಿಮ್ಮ ಮನೆಯ ಬಳಿ ಇರುವ ಶೆಡ್ ನಲ್ಲಿ ವಾರದಲ್ಲಿ **2-3** ದಿನ ಮಧ್ಯ ಸೇವಿಸುತ್ತೀರಿ ಎಂದರೆ ಸರಿಯಲ್ಲ. ನೀವು ಹಾಗೂ ಆರೋಪಿ ಆಗಾಗ ಮಧ್ಯಸೇವನೆಗಾಗಿ ನಿಮ್ಮ ಮನೆಯ ಬಳಿ ಸೇರುತ್ತೀದ್ದೀರಿ ಎಂದರೆ ಸರಿಯಲ್ಲ.

ನಿಮ್ಮ ಮಗ ಯಾವಾಗ ಮೃತಪಟ್ಟ ಎಂದರೆ ಸಾಕ್ಷಿ **23.10.2022** ರಂದು ಎಂದು ಹೇಳುತ್ತಾರೆ. ನಿಮ್ಮ ಮಗ **2020** ರಲ್ಲೇ ಮೃತಪಟ್ಟಿದ್ದ ಎಂದರೆ ಸರಿಯಲ್ಲ. ನೀವು ಆರೋಪಿಯನ್ನು ಹೊರತುಪಡಿಸಿ ಬೇರೆ ಯಾರಿಗಾದರೂ ಹಣ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನೀವು ಹಾಗೂ ಆರೋಪಿ ಕುಡಿತದ ಚಟಕ್ಕೆ ಒಳಗಾಗಿದ್ದು, ಕುಡಿತದ ಚಟಕ್ಕಾಗಿ ಆರೋಪಿಯಿಂದ ಚೆಕ್ ಪಡೆದು, ಆರೋಪಿಗೆ **50** ಸಾವಿರ ನೀಡಿ, ಅದರಲ್ಲಿ ನೀವು ಸಹ ಕುಡಿದಿರುತ್ತೀರಿ ಎಂದರೆ ಸರಿಯಲ್ಲ. ಸದರಿ ವಿಚಾರ ಆರೋಪಿಯ ತಂದೆಗೆ ಗೊತ್ತಾಗುತ್ತದೆಂಬ ಕಾರಣಕ್ಕಾಗಿ, ಅವರ ತಂದೆ ಹಾಗೂ ನೀವು ಒಂದೇ ಊರಿನವರಾಗಿದ್ದರೂ, ಅದನ್ನು ಮರೆಮಾಚಿರುತ್ತೀರಿ ಎಂದರೆ ಸರಿಯಲ್ಲ. ಆರೋಪಿ ಪಡೆದಿದ್ದ **50** ಸಾವಿರ ರೂ. ಗಳಿಗೆ ನಿಪಿ-**1** ರಂತೆ ಚೆಕ್ ನ್ನು ಭದ್ರತೆಗಾಗಿ **50** ಸಾವಿರ ರೂ. ಗಳನ್ನು ನಮೂದಿಸಿ ನಿಮಗೆ ಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. ನಿಪಿ-**1** ರಲ್ಲಿ ಆರೋಪಿ ನಮೂದಿಸಿದ **50** ಸಾವಿರ ಹಿಂದೆ **3** ಅಕ್ಷರ ಸೇರಿಸಿ,

ಅಕ್ಷರದಲ್ಲಿ ಮೂರು ಲಕ್ಷದ ಐವತ್ತು ಸಾವಿರ ಎಂದು ನಮೂದಿಸಿದ್ದು, ಹಾಗಾಗಿ ನಿಪಿ-1 ರಂತೆ ಚೆಕ್ ನಲ್ಲಿ ಅಕ್ಷರ ಹಾಗೂ ನೊಂದಾಯಿಸಿದ ಹಣದಲ್ಲಿ ವ್ಯತ್ಯಾಸ ಇದೆ ಎಂದರೆ ಸಾಕ್ಷಿ ಅವರೇ ನೊಂದಾಯಿಸಿಕೊಟ್ಟಿದ್ದು ಎಂದು ಹೇಳುತ್ತಾರೆ. ನೀವುಗಳು ಕುಡಿಯಲು ಉಪಯೋಗಿಸಿದ ಹಣವನ್ನು ಆರೋಪಿ ವಾರದ ಕಂತುಗಳಲ್ಲಿ ನಿಮಗೆ ಮರುಪಾವತಿಸಿರುತ್ತಾನೆ ಎಂದರೆ ಸರಿಯಲ್ಲ. ಹಣವನ್ನು ಮರುಪಾವತಿಸಿದ ನಂತರ ಆರೋಪಿ ಚೆಕ್ ನ್ನು ಹಿಂತಿರುಗಿಸಿ ಕೊಡುವಂತೆ ಕೇಳಿದ್ದು, ನೀವು ಸದರಿ ಚೆಕ್ ಕಳೆದು ಹೋಗಿದೆ, ಸಿಕ್ಕಿದಾಗ ವಾಪಸ್ಸು ಕೊಡುವುದಾಗಿ ಹೇಳಿದ್ದರಿಂದ, ಆರೋಪಿ ನೀವು ಸ್ನೇಹಿತರಾಗಿದ್ದರಿಂದ, ನಿಮ್ಮ ಮಾತನ್ನು ನಂಬಿ ಆರೋಪಿ ಸುಮ್ಮನಾದ ಎಂದರೆ ಸರಿಯಲ್ಲ. ಆರೋಪಿ ನಿಮ್ಮನ್ನು ಹಲವಾರು ಬಾರಿ ಚೆಕ್ ವಾಪಸ್ಸು ಕೊಡುವಂತೆ ಕೇಳಿದ್ದು, ನೀವು ಕೊಡದೇ ಇದ್ದಾಗ, ಆರೋಪಿ ಚೆಕ್ ನ್ನು ವಾಪಸ್ಸು ಕೊಟ್ಟಿಲ್ಲದ ವಿಚಾರ ಆರೋಪಿಯ ತಂದೆಯ ಗಮನಕ್ಕೆ ಬಂದಿರುತ್ತದೆಂದರೆ ಸರಿಯಲ್ಲ. ಆರೋಪಿಯ ತಂದೆ ಮತ್ತು ಗ್ರಾಮಸ್ಥರು ಬಂದು ಸದರಿ ಚೆಕ್ ನ್ನು ವಾಪಸ್ಸು ಕೊಡುವಂತೆ ನಿಮ್ಮನ್ನು ಕೇಳಿದ್ದು, ಆಗ ನೀವು ಗ್ರಾಮಸ್ಥರ ಸಮಕ್ಷಮ, ಚೆಕ್ ದೊರೆತಾಗ ವಾಪಸ್ಸು ಕೊಡುವುದಾಗಿ ಹೇಳಿ, ಒಪ್ಪಿಗೆ ಪತ್ರ ಬರೆದುಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ. ಆರೋಪಿ ಆರ್ಥಿಕವಾಗಿ ಸದೃಢನಾಗಿದ್ದು, ಅವನಿಂದ ಅನ್ಯಥಾ ಪಾಯಿದೆ ಹೊಂದುವ ಉದ್ದೇಶದಿಂದ, ನಿಮ್ಮ ಮನೆಯಲ್ಲಿದ್ದ ಚೆಕ್ ನ್ನು ಉಪಯೋಗಿಸಿಕೊಂಡು, ಆರೋಪಿಯ ವಿರುದ್ಧ ಸುಳ್ಳು ಪಿರ್ಯಾದನ್ನು ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ.

ಆರೋಪಿ ಕಂಪಲಾಪುರ ಗ್ರಾಮದಲ್ಲಿ ಸುಮಾರು 40 ಎಕರೆ ಜಮೀನು ಹಾಗೂ ವಾಣಿಜ್ಯ ಮಳಿಗೆಗಳನ್ನು ಹೊಂದಿದ್ದು, ಆತ ಆರ್ಥಿಕವಾಗಿ ಸದೃಢನಾಗಿದ್ದು, ನಿಮ್ಮ ಬಳಿ ಸಾಲ ಕೇಳುವ ಪ್ರಮೇಯವೇ ಉದ್ಭವಿಸಿಲ್ಲ ಎಂದರೆ ಸರಿಯಲ್ಲ. ನಿಮಗೆ ಮೂರುವರೆ ಲಕ್ಷ ಹಣವನ್ನು ನೀಡುವ ಆರ್ಥಿಕ ಚೈತನ್ಯ ಇಲ್ಲ ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ನಿಮಗೆ ಆರ್ಥಿಕ ಚೈತನ್ಯ ಇದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

ಆರೋಪಿಗೆ ನೀವು ನಿಪಿ-**3** ರಂತೆ ನೋಟೀಸ್ ನೀಡಿದ್ದು**,** ದಿಃ **06.05.2022** ರಂದು ಆರೋಪಿ ನಿಮಗೆ ಪ್ರತ್ಯುತ್ತರ ನೊಟೀಸ್ ನೀಡಿ**,** ನೀವು ಹಾಗೂ ಆರೋಪಿ ಸೇರಿ ಮಾಡಿದ ವ್ಯವಹಾರವನ್ನು ಸದರಿ ಪ್ರತ್ಯುತ್ತರ ನೊಟೀಸ್ ನಲ್ಲಿ ಹೇಳಿರುತ್ತಾರೆ ಎಂದರೆ ಸರಿಯಲ್ಲ**.** ನಿಪಿ-**1** ರಲ್ಲಿ ಅಂಕಿಯಲ್ಲಿ ನಮೂದಿಸಿರುವ **50,000** ಹಾಗೂ **3** ಅಂಕಿಗಳಲ್ಲಿ ಬರವಣಿಗೆಯ ವ್ಯತ್ಯಾಸದ ಇದೆ ಎಂದರೆ ಸಾಕ್ಷಿ ಇಲ್ಲ**,** ಆರೋಪಿಯೇ ಬರೆದುಕೊಟ್ಟಿದ್ದು ಎಂದು ಹೇಳುತ್ತಾರೆ**.** ಆರೋಪಿ ನಿಮಗೆ ಯಾವುದೇ ಹಣವನ್ನು ಕೊಡಬೇಕಾಗಿಲ್ಲ**,** ನಿಮ್ಮ ಹಾಗೂ ಆರೋಪಿಯ ಕುಡಿತದ ಚಟಕ್ಕೆ ಹಣವನ್ನು ಉಪಯೋಗಿಸಿಕೊಂಡು**,** ಆರೋಪಿಯಿಂದ ಪಡೆದ ನಿಪಿ-**1** ರಂತೆ ಚೆಕ್ ನಲ್ಲಿ **3,50,000/-** ಎಂದು ನಮೂದಿಸಿ ಸುಳ್ಳು ದೂರು ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ**.** ಆರೋಪಿ ತಾನು ಪಡೆದಿದ್ದ **50** ಸಾವಿರ ರೂ**.** ಗಳನ್ನು ಕಂತಿನ ಮುಖೇನ ಮರುಪಾವತಿ ಮಾಡಿದ್ದು**,** ಆರೋಪಿಯ ಕುಡಿತದ ಚಟವನ್ನು ದುರುಪಯೋಗಪಡಿಸಿಕೊಂಡು**,** ಆತನಿಂದ ಹೆಚ್ಚಿನ ಹಣವನ್ನು ವಸೂಲಾತಿ ಮಾಡಲು**,** ನಿಪಿ-**1** ರಂತೆ ಚೆಕ್ ನಲ್ಲಿ **3,50,000/-** ಎಂದು ನಮೂದಿಸಿ ಸುಳ್ಳು ದೂರು ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ**.** ನೀವು ನ್ಯಾಯಾಲಯದ ಮುಂದೆ ನಿಮ್ಮ ದೂರಿನಲ್ಲಿ ಹೇಳಿರುವ ವಿಚಾರ ಹಾಗೂ ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ**.** ಆರೋಪಿ ನಿಮಗೆ ಯಾವುದೇ ಹಣ ಕೊಡಬೇಕಾಗಿಲ್ಲ ಎಂದರೆ ಸರಿಯಲ್ಲ**.**

**(** ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು**,** ಆಲಿಸಿ ಅನುಮತಿಸಲಾಯಿತು**.)**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು